ಉ) ಮಾಸಾಶನವನ್ನು ವಿತರಿಸುವಲ್ಲಿ ಜನವರಿ 1995ರಲ್ಲಿ ಮಾತ್ರ ವಿಳಂಬವಾಗಿದ್ದು, ಜನವರಿ 95ರಿಂದ ಜೂನ್ 95ವರೆಗಿನ ಮಾಸಾಶನವನ್ನು ಪೂರ್ತಿಯಾಗಿ ಪಾವತಿಸಿಲಾಗಿದೆ. ಜುಲೈ 95ರ ಮತ್ತು ಆಗಸ್ಟ್ 95ರ ಮಾಸಾಶನವನ್ನು ಕೂಡ ಪಾವತಿಸಲಗಿದೆ..

**ರಾಜ್ಯದಲ್ಲಿ ವಿಶೇಷ ನ್ಯಾಯಾಲಯಗಳ ಸ್ಥಾಪನೆ**

2079 - ಶ್ರೀ ನಾರಾಯಣದಾಸ್ (ಪರಪನಹಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಮೇಲೆ ದೌರ್ಜನ್ಯಗಳನ್ನು ವಿವಾದಿಸಲು ಎಷ್ಟು ವಿಶೇಷ ನ್ಯಾಯಾಲಯಗಳು ಸ್ಥಾಪಿತವಾಗಿವೆ, ಮತ್ತು ಎಲ್ಲೆಲ್ಲಿ ಇವೆ;*

*ಆ) ಈ ನ್ಯಾಯಾಲಯಗಳಲ್ಲಿ ದೌರ್ಜನ್ಯ ಪ್ರಕರಣಗಳು ಎಷ್ಟು ದಾಖಲಾಗಿವೆ;*

*ಇ) ದಾಖಲಾಗಿರುವ ಪ್ರಕರಣಗಳಲ್ಲಿ ವಿಚಾರಣೆಯಾಗಿ ಇದುವರೆಗೆ ಎಷ್ಟು ಜನರಿಗೆ ಶಿಕ್ಷೆ ವಿಧಿಸಲಾಗಿದೆ?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಮೇಲಿನ ದೌರ್ಜನ್ಯಗಳನ್ನು ವಿವಾದಿಸಲು ಕೆಳಕಂಡ ನಾಲ್ಕು (4) ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ.

1) ಬಿಜಾಪುರ

2) ಗುಲ್ಬರ್ಗಾ

3) ಕೋಲಾರ

4) ರಾಯಚೂರು

ಆ) ದಾಖಲಾಗಿರುವ ದೌರ್ಜನ್ಯ ಪ್ರಕರಣಗಳ ಸಂಖ್ಯೆ

| | | |
|---|---|---|
| 1) | ಬಿಜಾಪುರ | 550 |
| 2) | ಗುಲ್ಬರ್ಗಾ | 106 |
| 3) | ಕೋಲಾರ | 208 |
| 4) | ರಾಯಚೂರು | 181 |

ಇ) ಶಿಕ್ಷೆ

| | | |
|---|---|---|
| 1) | ಬಿಜಾಪುರ | 8 |
| 2) | ಗುಲ್ಬರ್ಗಾ | - |
| 3) | ಕೋಲಾರ | 2 |
| 4) | ರಾಯಚೂರು | - |

**ಮಹಾನಗರ ಪಾಲಿಕೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಶೇ. 18 ಹಣ ಖರ್ಚು ಮಾಡುವ ಬಗ್ಗೆ.**

2081 - ಶ್ರೀ ಡಿ. ನಾರಾಯಣದಾಸ್ (ಹರಪನಹಳ್ಳಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದಲ್ಲಿ ಎಷ್ಟು ಮಹಾನಗರ ಪಾಲಿಕೆಗಳಿವೆ, ಅವು ಯಾವುವು?*

*ಆ) ಈ ಮಹಾನಗರ ಪಾಲಿಕೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಅವಧಿಯಲ್ಲಿ (1991-92, 1992-93,1993-94) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಶೇ. 18ರ ಹಣ ಎಷ್ಟು ಖರ್ಚು ಮಾಡಲಾಗಿದೆ, (ವರ್ಷಾವಾರು ವರದಿ ನೀಡುವುದು)*

*ಇ) ಶೇಕಡ 18ರಷ್ಟು ಹಣ ಖರ್ಚು ಮಾಡದೇ ಇದ್ದಂತಹ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಅಭಿವೃದ್ಧಿ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು ಏಳು ಮಹಾನಗರ ಪಾಲಿಕೆಗಳಿವೆ. ಅವುಗಳೆಂದರೆ

1) ಬೆಂಗಳೂರು ಮಹಾನಗರ ಪಾಲಿಕೆ.
2) ಮಂಗಳೂರು ಮಹಾನಗರ ಪಾಲಿಕೆ
3) ಬೆಳಗಾಂ ಮಹಾನಗರ ಪಾಲಿಕೆ
4) ಗುಲ್ಬರ್ಗಾ ಮಹಾನಗರ ಪಾಲಿಕೆ
5) ಶಿವಮೊಗ್ಗ -ಭದ್ರಾವತಿ ಮಹಾನಗರ ಪಾಲಿಕೆ
6) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
7) ಮೈಸೂರು ಮಹಾನಗರ ಪಾಲಿಕೆ.